## ಮಾಲಿಂಗ ಔಟ್?

ಎಲ್ಲ ಕೀರ್ತಿಗಳಿಗೂ ಒಂದು ಕೊನೆ ಇರುತ್ತದೆ ಎನ್ನುವುದು ನಿಜ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 'ಸ್ಪೆಶಲಿಸ್ಟ್ ಫಾಸ್ಟ್ ಬೌಲರ್' ಎಂಬ ವಿಶೇಷ ಬಿರುದು ಪಡೆದಿದ್ದ ಶ್ರೀಲಂಕಾದ ಲಸಿತ್ ಮಾಲಿಂಗ ಈಗ ಶ್ರೀಲಂಕಾ ಏಕದಿನ ತಂಡದಿಂದ ಡ್ರಾಪ್ ಆಗುವ ಸುದ್ದಿ ಬಂದಿದೆ. ಏಕದಿನ ಕ್ರಿಕೆಟ್ ತಂಡಕ್ಕೆ ಹೊಸ ರಕ್ತವನ್ನು ತುಂಬಲು ನಿರ್ಧರಿಸಿರುವ ಶ್ರೀಲಂಕಾ ಕ್ರಿಕೆಟ್ ಮಂಡಲಿ, ಲಸಿತ್ ಮಾಲಿಂಗ ಸಹಿತ ಹಲವು ಹಿರಿಯ ಆಟಗಾರರಿಗೆ ಗೇಟ್‌ಪಾಸ್ ನೀಡುವ ಸಿದ್ಧತೆಯಲ್ಲಿದೆ.

ಇತ್ತೀಚಿನವರೆಗೂ ಶ್ರೀಲಂಕಾ ತಂಡದ ಅತ್ಯಂತ ಯಶಸ್ವಿ ಬೌಲರ್ ಆಗಿದ್ದ ಮಾಲಿಂಗ, ಸ್ಲಿಂಗಾ ಮಾಲಿಂಗ ಎಂದೇ ಹೆಸರುವಾಸಿ. ಈತನ ಚೆಂಡು ಎಸೆಯುವ ಕ್ರಮದ ಬಗ್ಗೆ ಏನೇ ತಕರಾರುಗಳಿದ್ದರೂ, ಬ್ಯಾಟ್ಸ್‌ಮನ್ ರನ್ ಗಳಿಸಲು ಸಾಧ್ಯವೇ ಇಲ್ಲದ ರೀತಿಯಲ್ಲಿ ಎಸೆಯುವುದು ಈತನ ಜಾಣತನ. ಗಂಟೆಗೆ 140 ಕಿ.ಮೀ ವೇಗದ ಎಸೆತಗಳನ್ನು ನೀಡುವ ಮಾಲಿಂಗ, 2011ರಲ್ಲಿ 155.7 ಕಿ.ಮೀ ವೇಗ ದಾಖಲಿಸಿ ಎದುರಾಳಿಗಳ ತೊಳ್ಳೆ ನಡುಗಿಸಿದ್ದೂ ಉಂಟು. ನಾಲ್ಕು ಸತತ ಎಸೆತಗಳಲ್ಲಿ ನಾಲ್ಕು ವಿಕೆಟ್‌ಗಳನ್ನು ಉರುಳಿಸುವ ಮೂಲಕ ಅಂತರರಾಷ್ಟ್ರೀಯ ಪಂದ್ಯದಲ್ಲಿ ಯಾವ ಬೌಲರ್‌ಗಳೂ ಮಾಡದ ಸಾಧನೆಯನ್ನು ದಾಖಲಿಸಿರುವ ಮಾಲಿಂಗ, ಇತ್ತೀಚಿನ ಪಾಕಿಸ್ತಾನ ವಿರುದ್ಧದ ಪಂದ್ಯಗಳಲ್ಲಿ ದಯನೀಯ ಪ್ರದರ್ಶನ ನೀಡಿದ್ದಾರೆ. ಎರಡು ಪಂದ್ಯಗಳಲ್ಲಿ ತಲಾ10 ಓವರ್‌ಗಳನ್ನು ಮಾಡಿಯೂ ಒಂದೇ ಒಂದು ವಿಕೆಟ್ ಪಡೆಯಲಾಗಲಿಲ್ಲ. ಜತೆಗೆ ಕೆಟ್ಟ ಫೀಲ್ಡಿಂಗ್ ಬೇರೆ.

ಇತ್ತೀಚೆಗೆ ಮಾಲಿಂಗ ಮತ್ತು ಶ್ರೀಲಂಕಾ ಕ್ರಿಕೆಟ್ ಆಡಳಿತದ ನಡುವಣ ಸಂಬಂಧವೂ ಹಳಸಿದೆ. ಟೆಸ್ಟ್ ಕ್ರಿಕೆಟ್‌ನಲ್ಲಿ ದೇಶಕ್ಕಾಗಿ ಆಡುವುದನ್ನು ಬಿಟ್ಟು, ಧಾರಾಳ ಹಣ ಸಿಗುವ 20 ಟ್ವೆಂಟಿ ಪಂದ್ಯಗಳಲ್ಲಿ ಕಳೆದ ವರ್ಷ ಆಡಿ ಸುದ್ದಿ ಮಾಡಿದ್ದ ಮಾಲಿಂಗ ಅದೇ ಹಿನ್ನೆಲೆಯಲ್ಲಿ ಟೆಸ್ಟ್‌ಗೆ ವಿದಾಯವನ್ನೂ ಘೋಷಿಸಿದ್ದರು. ಇತ್ತೀಚೆಗೆ ಪದೇ ಪದೇ ಮೊಣಕಾಲು ನೋವಿನ ನೆಪ ಹೇಳಿ ರಾಷ್ಟ್ರೀಯ ತಂಡದ ತರಬೇತಿಗೂ ಗೈರುಹಾಜರಾಗಿದ್ದರು. ಹಾಗಾಗಿ ಈ ತಿಂಗಳ ಕೊನೆಗೆ ಬಾಂಗ್ಲಾ ಪ್ರವಾಸ ಹೊರಡಲಿರುವ ಏಕದಿನ ತಂಡದಲ್ಲಿ ಮಾಲಿಂಗ ಸ್ಥಾನ ಪಡೆಯುವುದು ಕಷ್ಟ ಎನ್ನಲಾಗುತ್ತಿದೆ. ಆದರೆ ಟ್ವೆಂಟಿ-20 ಪಂದ್ಯಗಳೇ ಪ್ರಾಮುಖ್ಯ ಎನ್ನಿಸಿರುವ ಈ ದಿನಗಳಲ್ಲಿ ತಮ್ಮ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಸಿಗದಿದ್ದರೂ ಆಟಗಾರರು ಬೇಜಾರು ಮಾಡಿಕೊಳ್ಳುತ್ತಿಲ್ಲ ಎನ್ನುವುದು ವಾಸ್ತವ! ಮಾಲಿಂಗ ಕೂಡಾ ಇದಕ್ಕೆ ಹೊರತಲ್ಲ ಎನ್ನಲಡ್ಡಿಯಿಲ್ಲ!






## ಜಾನ್ ಸಂಭ್ರಮ

ಬಾಲಿವುಡ್‌ನ ಸುರಸುಂದರಾಂಗ ನಟ ಜಾನ್ ಅಬ್ರಹಾಂ ಮದುವೆ ಆಯಿತಂತೆ. ಹಾಗೆಂದು ಆತನೇ ಸ್ವತಃ ಟ್ವೀಟ್ ಮಾಡಿ ಲಕ್ಷಾಂತರ ಮಹಿಳಾ ಅಭಿಮಾನಿಗಳಿಗೆ ನಿರಾಶೆ ಉಂಟು ಮಾಡಿದ್ದಾನೆ. ಇನ್‌ವೆಸ್ಟ್‌ಮೆಂಟ್ ಬ್ಯಾಂಕರ್ ಆಗಿರುವ ಪ್ರಿಯಾ ರುಂಚಾಲ್ ಈತನ 'ಮನೆ' ಗೆದ್ದ ಹುಡುಗಿ. (ಮನ ಗೆದ್ದ ಬಿಪಾಸಾ ಬಸು ಈತನ ಸಂಗ ತೊರೆದು ವರ್ಷ ಕಳೆದಿದೆ!) ತಿಂಗಳ ಹಿಂದೆಯೇ ಮದುವೆ ಮಾಡಿಕೊಳ್ಳುವುದು ಖಚಿತ ಆಗಿತ್ತಂತೆ. ಗುಟ್ಟಾಗಿ ಕ್ಯಾಲಿಫೋರ್ನಿಯಾಗೆ ಹೋಗಿ ಕೆಲವೇ ಸಂಬಂಧಿಕರ ಮಧ್ಯೆ ಮದುವೆ ಸಂಭ್ರಮ ಹಂಚಿಕೊಂಡರಂತೆ.

ಜಾನ್‌ಗೆ ಈಗ 41ರ ಹರೆಯ. ಪ್ರಿಯಾ ಕಳೆದ ಮೂರು ವರ್ಷಗಳಿಂದ ಜಾನ್ ಗರ್ಲ್ ಫ್ರೆಂಡ್ ಆಗಿದ್ದಳಂತೆ. ಲಂಡನ್ನಿನಲ್ಲೇ ಕಲಿಕೆ-ದುಡಿಮೆ ಎರಡನ್ನೂ ಮಾಡುತ್ತಿರುವ ಪ್ರಿಯಾ, ಗಂಡನ ಜತೆ ಅಲ್ಲೇ ಸೆಟ್ಲ್ ಆಗುವುದು ನಿಶ್ಚಿತವಾಗಿದೆ.

ನಟ ಜಾನ್ ಈಗ ನಿರ್ಮಾಪಕನಾಗಿಯೂ ಜನಪ್ರಿಯ. ಈತ ಹಣ ಹಾಕಿ ನಿರ್ಮಿಸಿದ ವಿಕಿ ಡೋನರ್ ಮತ್ತು ಮದ್ರಾಸ್ ಕೆಫೆ ಚಿತ್ರಗಳು ಸಾಕಷ್ಟು ಹಣ ಮಾಡಿದ್ದೂ ಅಲ್ಲದೆ, ವಿಮರ್ಶಕರ ಮನಸ್ಸನ್ನೂ ಗೆದ್ದಿವೆ. ಈಗ ಭಾರತದ ಉದ್ಯಮ ರಂಗದ ಪಿತಾಮಹ ಜೆ.ಆರ್.ಡಿ.ಟಾಟಾ ಅವರ ಜೀವನ ಚರಿತ್ರೆಯನ್ನು ಆಧರಿಸಿ ಹೊಸ ಸಿನಿಮಾ ನಿರ್ಮಿಸುವ ತಯಾರಿಯಲ್ಲಿದ್ದಾನೆ ಜಾನ್. ಈ ಚಿತ್ರಕ್ಕೆ ಟಾಟಾ ಸನ್ಸ್ ಅಥವಾ ಜಮ್ಶೆಡ್ ಜೀ ಎಂಬ ಹೆಸರಿಡುವ ಸಾಧ್ಯತೆ ಇದೆಯಂತೆ. ಜೆಆರ್‌ಡಿ ಅವರ ತಂದೆ ಪಾರ್ಸಿ ಹಾಗೂ ತಾಯಿ ಫ್ರೆಂಚ್. ಹಾಗೆಯೇ ಜಾನ್‌ನ ತಾಯಿ ಪಾರ್ಸಿ ಆಗಿರುವುದರಿಂದ ಜೆಆರ್‌ಡಿ ಪಾತ್ರದ ನಟನೆಯನ್ನೂ ಈತನೇ ಮಾಡುವ ಸಾಧ್ಯತೆ ಇದೆಯಂತೆ. ಈ ಹಿಂದೆ ಧೀರೂಭಾಯಿ ಅಂಬಾನಿಯ ವ್ಯಕ್ತಿತ್ವವನ್ನು ಆಧರಿಸಿ 'ಗುರು' ಎಂಬ ಸಿನಿಮಾದಲ್ಲಿ ಅಭಿಷೇಕ್ ನಟಿಸಿ ಯಶಸ್ವಿಯಾದ ಉದಾಹರಣೆ ಕಣ್ಣ ಮುಂದಿದೆ. ಹಾಗಾಗಿ ಜಾನ್‌ನ ಈ ಹೊಸ ಸಾಹಸಕ್ಕೂ ಯಶ ಸಿಗಬಹುದು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65